## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ 811/2025**

**ಸಾಕ್ಷಿಃ ಸಿಡಬ್ಲ್ಯೂಃ 5, ಪಿ.ಡಬ್ಲ್ಯೂಃ 5**

ಸಾಕ್ಷಿದಾರರ ಹೆಸರು : ಗಜಾನನ ನಾಯ್ಕ

ತಂದೆಯ ಹೆಸರು : ಮಹಾಬಲೇಶ್ವರ ನಾಯ್ಕ

ವಯಸ್ಸು : 37 ವರ್ಷ

ಉದ್ಯೋಗ : ಪೇದೆ , ಅಬಕಾರಿ ತನಿಖಾ ಠಾಣೆ, ಅನಮೋಡ ,ಜೊಯ್ಡಾ

ವಾಸ್ತವ್ಯ : ಅನಮೋಡ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 06/03/2026**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ನಾನು ದಿಃ 12.09.2019 ರಿಂದ 30.08.2025 ರವರೆಗೆ ಅಬಕಾರಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿ. 21.11.2023 ರಂದು ಚಾಸಾ 1 ಮತ್ತು 4 ರವರು ಮಾರ್ಗ ಸಂಖ್ಯೆ 6 ರಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರಿಗೆ ಬಂದಂತ ಬಾತ್ಮಿಯಂತೆ ಭಟ್ಕಳ ತಾಲೂಕಿನ ಉತ್ತರ ಕೊಪ್ಪದ ಬುದಿಯ ಮರಾಠಿ ರವರು ಕಳ್ಳ ಬಟ್ಟಿ ಸರಾಯಿ ತಯಾರಿಸುತ್ತಿರುವ ಬಗ್ಗೆ ಹಾಗೂ ಮಾರಾಟ ಮಾಡುವ ಬಗ್ಗೆ ಚಾಸಾ 1 ರವರು ಸ್ಥಳದಲ್ಲಿ ಶೋಧನ ಸುಮುಚ್ಚಿತ ಆದಾರ ತಯಾರಿಸಿ ಬೆಳಿಗ್ಗೆ ಕೂಲಿಗಾಗಿ ಹೋಗುತ್ತಿರುವ ಇಬ್ಬರು ಆಸಾಮಿಗಳನ್ನು ವಿಷಯ ತಿಳಿಸಿ ಸಾಕ್ಷಿದಾರರಾಗಲು ಕರೆದಿದ್ದು ಅವರು ಒಪ್ಪಿದ್ದು ನಂತರ ಆರೋಪಿಯ ಮನೆಗೆ ತೆರಳಿದಾಗ ಆತನು ಮನೆಯಲ್ಲಿದ್ದು, ಆತನ ಹೆಸರು ಕೇಳಿದ್ದು ಆತ ಬುದಿಯಾ ಎಂದು ತಿಳಿಸಿದ್ದು ಆಗ ಬೆಳಿಗ್ಗೆ 7.30 ಗಂಟೆ ಆಗಿತ್ತು. ಸದರಿ ಮನೆಯ ಉತ್ತರ ಭಾಗದಲ್ಲಿ 20 ಲೀಟರ್ ಸಾಮರ್ಥ್ಯದ ಕ್ಯಾನಿನಲ್ಲಿ ಬೆಲ್ಲದ ಕೊಳೆ ಇದ್ದು ಸದರಿ ಕ್ಯಾನ್ ಕೆಂಪು ಮುಚ್ಚಳದಾಗಿದ್ದು ಅದನ್ನು ತೆರೆದಾಗ ಅದು ಬೆಲ್ಲದ ಕೊಳೆ ಎಂದು ಅದನ್ನು ಸರಾಯಿ ತಯಾರಿಸಲು ಮಾಡಿರುವುದಾಗಿ ಆರೋಪಿ ತಿಳಿಸಿರುತ್ತಾನೆ. ನಂತರ ಆರೋಪಿಯ ಮನೆಯ ಹಿಂಬಾಗ ಪರಿಶೀಲನೆ ಮಾಡಿದಾಗ ಮನೆ ಹಿಂದೆ ಇರುವ ಬಾಳೆ ತೋಟದಲ್ಲಿ 25 ಲೀಟರ್ ಸಾಮರ್ಥ್ಯದ ಕ್ಯಾನಿನಲ್ಲಿ 20 ಲೀಟರ ಕಳ್ಳಬಟ್ಟಿ ಸರಾಯಿ ಇದ್ದು ಸದರಿ ಆರೋಪಿಯನ್ನು ಕೇಳಿದಾಗ ಅದು ಕಳ್ಳಬಟ್ಟಿ ಸರಾಯಿ ಎಂದು ತಿಳಿಸಿದ್ದು ಇನ್ನೊಂದು ಸರಾಯಿ ವಾಸನೆ ಇರುವ ಕ್ಯಾನು ಖಾಲಿ ಇತ್ತು. ದೊರೆತ ಕಳ್ಳಬಟ್ಟಿ ಸರಾಯಿಯಿಂದ 500 ಎಮ ಎಲ ಸಾಮರ್ಥ್ಯದ 2 ಪ್ಲಾಸ್ಟಿಕ್ ಬಾಟಲಿಯನ್ನು ತಲಾ 500 ಎಮ ಎಮ ಎಲ ನಂತೆ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಇಲಾಖಾ ಸೀಲು ಹಾಕಿ ಪಂಚರ ಸಹಿ ಪಡೆಯಲಾಗಿತ್ತು . ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುದ್ದೆ ಮಾಲು –1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ–2 ರಲ್ಲಿರುವ ತಮ್ಮ ಸಹಿ ನೋಡಿ

ಗುರುತಿಸಿದ್ದು ಅದನ್ನು ನಿಪಿ-2 ಇ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಡಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ ಜೆ ಎನ ವಕೀಲರಿಂದ,**

ಸದರಿ ಪ್ರಕರಣದಲ್ಲಿ ಚಾಸಾ 2 ಮತ್ತು 3 ರವರನ್ನು ಹೊರತುಪಡಿಸಿ ಉಳಿದೆಲ್ಲರು ನಮ್ಮ ಸಿಬಂದಿ ಆಗಿರುತ್ತಾರೆ. ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿ ಆಗಿರುತ್ತಾರೆ. ಚಾಸಾ 1 ರವರಿಗೆ ಪೋನ್ ಮೂಲಕ ಸದರಿ ಪ್ರಕರಣದ ಬಾತ್ಮಿ ಬಂದಿರುತ್ತದೆ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ ಆದರೆ ಪೋನ್ ಮೂಲಕ ತಿಳಿಸಿರುವುದಿಲ್ಲ. ಬಾತ್ಮಿ ನೀಡಿದವರು ದಾಳಿ ಕಾಲಕ್ಕೆ ಇರಲಿಲ್ಲ. ಬಾತ್ಮಿದಾರರು ದಾಳಿ ನೋಡಿದ್ದು ಇರುವುದಿಲ್ಲ. ನಾವು ಬೆಳಿಗ್ಗೆ 5.30 ಗಂಟೆಗೆ ಗುನ್ನಾ ಸ್ಥಳಕ್ಕೆ ಕಚೇರಿಯಿಂದ ಹೊರಟಿರುತ್ತೇವೆ. ದಾಳಿಯ ಪೂರ್ವದಲ್ಲಿ ಇಲಾಖಾ ಕೇಸ ಡೈರಿಯಲ್ಲಿ ನ ಮುದು ಮಾಡಿಲ್ಲ ಆದರೆ ಗಸ್ತು ಕರ್ತವ್ಯದಲ್ಲಿ ಇದ್ದ ಬಗ್ಗೆ ನಮೂದು ಮಾಡಲಾಗಿದೆ. ಸದರಿ ಕೇಸ್ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಗುನ್ನಾ ಸ್ಥಳ ನಮ್ಮ ಕಚೇರಿಯಿಂದ ಅಂದಾಜು 40 ಕಿಮಿ ದೂದರಲ್ಲಿ ಇದೆ. ಗುನ್ನಾ ಸ್ಥಳಕ್ಕೆ ಹೋಗಲು ಒಂದುವರೆ ಗಂಟೆ ಕಾಲ ಬೇಕಾಗುತ್ತದೆ. ನಾವು ಬೆಳಿಗ್ಗೆ 7.30 ಗಂಟೆಗೆ ಗುನ್ನಾ ಸ್ಥಳಕ್ಕೆ ತಲುಪಿರುತ್ತೇವೆ. ಗುನ್ನಾ ಸ್ಥಳಕ್ಕೆ ಹೋಗುವ ರಸ್ತೆ ಪಕ್ಕಾ ರಸ್ತೆ ಆಗಿದೆ. ಶೋಧನಾ ಕಾರ್ಯವನ್ನು 7.40 ರಿಂದ 7.55 ರವರೆಗೆ ಮಾಡಿರುತ್ತೇವೆ. ಪ್ರ ವ ವರದಿಯನ್ನು ಎಷ್ಟು ಗಂಟೆಗೆ ದಾಖಲು ಮಾಡಲಾಗಿದೆ ಎಂದು ನೆನಪಿಲ್ಲ. ದಾಳಿ ಮಾಡುವ ಮೊದಲು ಅಂಗಶೋಧನೆ ಬಗ್ಗೆ ಪಂಚನಾಿಮಯಲ್ಲಿ ಬರೆದಿದ್ದು ಆದರೆ ಪ್ರತ್ಯೇಕವಾದ ಪಂಚನಾಮೆ ಮಾಡಿಲ್ಲ. ಗುನ್ನಾ ಸ್ಥಳವನ್ನು ಬಾತ್ಮಿದಾರರು ತಿಳಿಸಿರುತ್ತಾರೆ. ಗುನ್ನಾ ಸ್ಥಳದ ಪರಿಚಯ ನಮಗೆ ಮೊದಲು ಇರಲಿಲ್ಲ. ಬಾತ್ಮಿದಾರರ ಹೇಳಿಕೆ ಪಡೆದಿಲ್ಲಾ. ದಾಳಿ ಪೂರ್ವದಲ್ಲಿ ಸರ್ಚ ವಾರಂಟನ್ನು ನ್ಯಾಯಾಲಯದಿಂದ ನಾವು ಪಡೆದಿಲ್ಲಾ. ಚಾಸಾ 1 , 4 ಮತ್ತು ನಾನು ಗುನ್ನಾ ಸ್ಥಳಕ್ಕೆ ಸರಕಾರಿ ವಾಹನದಲ್ಲಿ ಚಾಲಕನ ಜೊತೆಗೆ ಹೋಗಿರುತ್ತೇವೆ. ಆದರೆ ಚಾಲಕನು ದಾಳಿ ನೋಡಿದ್ದು ಇಲ್ಲಾ. ಚಾಲಕನ ಹೇಳಿಕೆ ಪಡೆದಿರುವುದಿಲ್ಲ. ಪಂಚನಾಮೆಯನ್ನು ಚಾಸಾ 1 ರವರು ಕೈಯಿಂದ ಬರೆದಿರುತ್ತಾರೆ. ಪಂಚನಾಮೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪಂಚರು ದಾರಿಯಲ್ಲಿ ಸಿಕ್ಕಿರುತ್ತಾರೆ. ಯಾವುದೇ ಪಂಚರು ಸಿಕ್ಕಿದ್ದು ಇಲ್ಲಾ ಕೂಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳಿಂದ ಒತ್ತಾಯ ಪೂರ್ವಕವಾಗಿ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಶ್ಯಾಂಪಲಿಗೆ ಕಳುಹಿಸಿದ ಮುದ್ದೆಮಾಲು ಹೊರತುಪಡಿಸಿ ಬೇರೆ ಯಾವುದೇ ವಸ್ತು ಇಲ್ಲಾ. ಆರೋಪಿಯಿಂದ ಯಾವುದೇ ಮುದ್ದೆಮಾಲು ವಶಕ್ಕೆ ಪಡೆದಿಲ್ಲಾ ಎಂದರೆ ಸರಿಯಲ್ಲ. ಒಂದು ವೇಳೆ ನಾವು ವಶಕ್ಕೆ ಪಡೆದಿದ್ದರೆ ಅದನ್ನುಹಾಜರುಪಡಿಸುತ್ತಿದ್ದೇವು ಎಂದರೆ ಸರಿಯಲ್ಲ. ನಮ್ಮ ಇಲಾಖೆಯಲ್ಲಿ ದೊರೆತಂತಹ ಶ್ಯಾಂಪಲನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಗುನ್ನಾಸ್ಥಳ ಬುದಿಯಾ ಮರಾಠಿಯವರಿಗೆ ಸಂಬಂಧಿಸಿದಾಗಿದೆ. ಸದರಿ ಜಾಗದ ಆರ್ ಟಿ ಸಿ ಯನ್ನು

ಹಾಜರುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲಾ. ಗುನ್ನಾ ಸ್ಥಳದಲ್ಲಿ ಇರುವ ಮನೆ ತನ್ನದೆಂದು ಆರೋಪಿ ಒಪ್ಪಿಕೊಂಡಿರುತ್ತಾರೆ. ಸದರಿ ಮನೆಯು ಆರೋಪಿಗೆ ಸಂಬಂಧಿಸಿದು ಎಂದು ಮೀಟರ್ ದಾಖಲೆಯನ್ನು ತನಿಖಾಧಿಕಾರಿಗಳು ಪಡೆದಿರಬಹುದು ನನಗೆ ಮಾಹಿತಿ ಇಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅಂಕೆ ಸಂಕೆಗಾಗಿ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.. ಆರೋಪಿಗೂ ಮುದ್ದೆಮಾಲಿಗೂ ಯಾವದೇ ಸಂಬಂಧ ಇರುವುದಿಲ್ಲವೆಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**